




ಡಾ. ಎಸ್. ರಾಮಮೂರ್ತಿ


# 20-9-2012ರಿಂದ 26-9-2012ರವರೆಗೆ




ವಾರದ ಆರಂಭದಲ್ಲಿ ಕಷ್ಟಗಳ ಸೇರ್ಪಡೆ. ಅನಾರೋಗ್ಯ, ಅನಾವಶ್ಯಕ ತಿರುಗಾಟ. ಉದ್ಯೋಗದಲ್ಲಿ ಕಿರಿಕಿರಿ. ವ್ಯಾಪಾರದಲ್ಲಿ ನಷ್ಟ. ಕಹಿ ಸಂದೇಶಗಳು. ವಾರದ ಮಧ್ಯಭಾಗದಿಂದ ಉತ್ಸಾಹ. ಒತ್ತಡ ನಿವಾರಣೆ. ಕಾರ್ಯಗಳಲ್ಲಿ ಸಫಲತೆ. ಮಿತ್ರರ ಸಹಾಯ. ಲೇವಾದೇವಿಗಳಲ್ಲಿ ಲಾಭ. ಕುಟುಂಬದಲ್ಲಿ ಶಾಂತಿ. ಶುಭದಿನ: 25; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸೌಖ್ಯ. ಪ್ರೀತಿ ಪಾತ್ರರ ಭೇಟಿ. ಕೆಲಸ ಕಾರ್ಯಗಳಲ್ಲಿ ಮುನ್ನಡೆ. ಅಧಿಕಾರಿಗಳಿಂದ ಸಹಾಯ. ವ್ಯಾಪಾರದಲ್ಲಿ ಲಾಭ. ಅಧ್ಯಯನದಲ್ಲಿ ಮೇಲುಗೈ. ವಾರದ ಮಧ್ಯಭಾಗದಲ್ಲಿ ಬೇಸರ. ನಿರೀಕ್ಷೆಗೆ ವಿರುದ್ಧ ಫಲ. ಆರೋಗ್ಯ ವ್ಯತ್ಯಯ. ಮೋಸವಾಗುವ ಸಾಧ್ಯತೆ. ಅನಾವಶ್ಯಕ ಕಲಹ. ಉದ್ಯೋಗದಲ್ಲಿ ಅಶಾಂತಿ. ಶುಭದಿನ: 21; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ





ವಾರದ ಮಧ್ಯಭಾಗದವರೆಗೂ ಸೌಖ್ಯ. ಕುಟುಂಬದಲ್ಲಿ ಒಮ್ಮತ. ಆಟ ಪಾಠ ಸ್ಪರ್ಧೆಗಳಲ್ಲಿ ಗೆಲುವು. ಕಾರ್ಯ ಸಾಧನೆ. ವ್ಯಾಪಾರದಲ್ಲಿ ಲಾಭ. ವಿರೋಧಿಗಳಿಗೆ ಹಿನ್ನಡೆ. ಸಂಘ ಸಂಸ್ಥೆಗಳಿಂದ ಸಹಾಯ. ಹಿತಕರ ಸಂದೇಶಗಳು. ವಾರಾಂತ್ಯದಲ್ಲಿ ಅಶಾಂತಿ, ಸೋಮಾರಿತನ. ಉದ್ಯೋಗದಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ಕುಟುಂಬದಲ್ಲಿ ಭಿನ್ನಮತ. ಶುಭದಿನ: 22; ಗಣಪತಿ, ಶಿವ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ನಿರೀಕ್ಷಿಸಿದಷ್ಟು ಫಲವಿಲ್ಲ. ವ್ಯಾಪಾರ ವೃತ್ತಿ ವಹಿವಾಟುಗಳಲ್ಲಿ ಲಾಭದ ಕೊರತೆ. ಸಂದೇಶಗಳ ವಿಳಂಬ. ಪ್ರಯಾಣದಲ್ಲಿ ಸಮಸ್ಯೆ. ವಾರದ ಮಧ್ಯಭಾಗದಿಂದ ಸಮಾಧಾನ. ಶ್ರಮ ಕಡಿಮೆಯಾಗುವುದು. ಅಧ್ಯಯನದಲ್ಲಿ ಪ್ರಗತಿ. ತಕರಾರುಗಳಲ್ಲಿ ಜಯ. ಆಪ್ತರ ಆಗಮನ. ಲೇವಾದೇವಿಗಳಲ್ಲಿ ಲಾಭ. ಶುಭದಿನ: 24; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಅಶಾಂತಿ. ಕುಟುಂಬ ಸದಸ್ಯರಲ್ಲಿ ವಿವಾದ. ಕೆಲಸ ಕಾರ್ಯಗಳಲ್ಲಿ ಅಡಚಣೆ. ಲೇವಾದೇವಿಗಳಲ್ಲಿ ಕಲಹ ಹಾಗೂ ನಷ್ಟ. ಪೆಟ್ಟಾಗುವ ಸಾಧ್ಯತೆ. ವಾರದ ಮಧ್ಯಭಾಗದಿಂದ ಸಮಾಧಾನ. ಮನೋಬಲ ವೃದ್ಧಿ. ವ್ಯಾಪಾರದಲ್ಲಿ ಲಾಭ. ಪ್ರೀತಿ ಪಾತ್ರರ ಆಗಮನ. ತಕರಾರುಗಳಲ್ಲಿ ನ್ಯಾಯ ಪ್ರಾಪ್ತಿ. ಆಟ ಪಾಠಗಳಲ್ಲಿ ಮುನ್ನಡೆ. ಶುಭದಿನ: 25; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ





ವಾರದ ಆರಂಭದಲ್ಲಿ ಸಂತೋಷ. ಆಪ್ತರ ಭೇಟಿ. ಉದ್ಯೋಗದಲ್ಲಿ ಸಫಲತೆ. ಆಟ ಪಾಠ ಸ್ಪರ್ಧೆಗಳಲ್ಲಿ ಗೆಲುವು. ಸಂತಸದ ಸಂದೇಶ. ವಾರದ ಮಧ್ಯಭಾಗದಲ್ಲಿ ಒತ್ತಡ. ದಂಡ ಕಟ್ಟುವ ಸಾಧ್ಯತೆ. ವಾಹನಗಳಿಂದ ತೊಂದರೆ. ಅನಾರೋಗ್ಯ, ವ್ಯವಹಾರಗಳಲ್ಲಿ ನಷ್ಟ. ಕಾರ್ಯ ವೈಫಲ್ಯ. ವಾರಾಂತ್ಯದಲ್ಲಿ ಪರಿಸ್ಥಿತಿ ಸುಧಾರಣೆ, ಸೌಖ್ಯ. ಶುಭದಿನ: 21; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಸೌಖ್ಯ. ಪ್ರೀತಿ ಪಾತ್ರರೊಂದಿಗೆ ಸಮಾಲೋಚನೆ. ಅಲ್ಪ ಶ್ರಮದಿಂದ ಕಾರ್ಯ ಸಾಧನೆ. ವ್ಯಾಪಾರದಲ್ಲಿ ಲಾಭ. ಆಟ ಪಾಠಗಳಲ್ಲಿ ಮುನ್ನಡೆ. ಹಿತಕರ ಸಂದೇಶಗಳು. ಕುಟುಂಬದ ಸದಸ್ಯರಲ್ಲಿ ಒಮ್ಮತ, ಗೌರವ ಪ್ರಾಪ್ತಿ. ವಾರಾಂತ್ಯದಲ್ಲಿ ಸೋಮಾರಿತನ. ಆರೋಗ್ಯ ವ್ಯತ್ಯಯ. ವೃತ್ತಿ ವೈಫಲ್ಯ. ಅನಾವಶ್ಯಕ ಖರ್ಚು. ಶುಭದಿನ: 22; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ





ಕೆಲಸ ಕಾರ್ಯಗಳಲ್ಲಿ ಒತ್ತಡ ಕಡಿಮೆಯಾಗಿ ಸಫಲವಾಗುವುದು. ವ್ಯಾಪಾರದಲ್ಲಿ ಲಾಭ. ತಕರಾರುಗಳಲ್ಲಿ ರಾಜಿ ಸಂಭವ. ಅಧ್ಯಯನದಲ್ಲಿ ಮೇಲುಗೈ. ವಾಹನ ಯಂತ್ರೋಪಕರಣಗಳು ಸರಾಗವಾಗಿ ನಡೆಯುವುದು. ಸುದ್ದಿ ಸಮಾಚಾರಗಳಿಂದ ಸಂತಸ. ಹಿತೈಷಿಗಳ ಆಗಮನ. ಉಡುಗೊರೆ ಪ್ರಾಪ್ತಿ. ನಿರಾತಂಕದ ಪ್ರಯಾಣ. ಶುಭದಿನ: 25; ಶಿವ, ಪಾರ್ವತಿ ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಏನಾದರೊಂದು ಸಮಸ್ಯೆ. ಮಕ್ಕಳಿಂದ ಒತ್ತಡ. ಉದ್ಯೋಗದಲ್ಲಿ ಅಶಾಂತಿ. ಅನಾರೋಗ್ಯ. ಪೆಟ್ಟಾಗುವ ಸಂಭವ, ಭಯ. ವಾರದ ಮಧ್ಯಭಾಗದಿಂದ ಚೇತರಿಕೆ ಸುಧಾರಣೆ. ಉತ್ಸಾಹದಿಂದ ಕಾರ್ಯ ನಿರ್ವಹಿಸುವಿಕೆ ಹಾಗೂ ಸಫಲತೆ. ವ್ಯವಹಾರಗಳಲ್ಲಿ ಲಾಭ. ಹಿತ ಸುದ್ದಿ. ಗಣ್ಯರಿಂದ ಸಹಾಯ. ಶುಭದಿನ: 25; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಸಂತಸ. ಹಿತಕರ ಘಟನೆಗಳು. ಅಲ್ಪ ಶ್ರಮದಿಂದ ಕಾರ್ಯ ಸಿದ್ಧಿ. ದೈವೀಕ ಕಾರ್ಯ ಯೋಜನೆ. ಪ್ರಯಾಣ ಸೌಖ್ಯ. ವಾರದ ಮಧ್ಯಭಾಗದಲ್ಲಿ ಒತ್ತಡ. ನಿರೀಕ್ಷೆಗೆ ವಿರುದ್ಧ ಫಲ. ಉದ್ಯೋಗದಲ್ಲಿ ತಪ್ಪಾಗುವಿಕೆ. ನಷ್ಟದ ವ್ಯವಹಾರ. ಆರೋಗ್ಯ ವ್ಯತ್ಯಯ. ವಿರೋಧಿಗಳಿಂದ ಉಪದ್ರವ. ವಾರಾಂತ್ಯದಲ್ಲಿ ಸುಧಾರಣೆ. ಶುಭದಿನ: 21; ಗಣಪತಿ, ಶಿವ ಅಷ್ಟೋತ್ತರ ಪಠಿಸಿ




ವಾರದ ಮಧ್ಯಭಾಗದವರೆಗೂ ಅನುಕೂಲ, ಅಭಿವೃದ್ಧಿ. ಪ್ರೀತಿಪಾತ್ರರ ಭೇಟಿ. ಕಾರ್ಯ ಸಿದ್ಧಿ. ವ್ಯಾಪಾರದಲ್ಲಿ ಲಾಭ. ಕುಟುಂಬದಲ್ಲಿ ಒಮ್ಮತ. ಗುರುಹಿರಿಯರ ದರ್ಶನ. ವಾಹನ ಸೌಖ್ಯ. ವಾರಾಂತ್ಯದಲ್ಲಿ ಆಕಸ್ಮಿಕ ನಷ್ಟ. ವಿಪರೀತ ಖರ್ಚು. ಪೆಟ್ಟಾಗುವ ಸಾಧ್ಯತೆ. ಉದ್ಯೋಗದಲ್ಲಿ ಕಿರಿಕಿರಿ. ಭಯದ ವಾತಾವರಣ. ಶುಭದಿನ: 23; ಲಕ್ಷ್ಮೀ, ವಿಷ್ಣು ಅಷ್ಟೋತ್ತರ ಪಠಿಸಿ




ವಾರದ ಆರಂಭದಲ್ಲಿ ಚಂಚಲತೆ. ಕಹಿ ಘಟನೆಗಳ ನೆನಪು. ಕೆಲಸದಲ್ಲಿ ನಿರಾಸಕ್ತಿ. ವ್ಯವಹಾರಗಳಲ್ಲಿ ಮಿತ ಲಾಭ. ಹಿರಿಯರೊಂದಿಗೆ ಕಲಹ. ವಾರದ ಮಧ್ಯಭಾಗದಿಂದ ಸಮಾಧಾನ. ದೃಢ ನಿರ್ಧಾರ ತೆಗೆದುಕೊಳ್ಳುವಿಕೆ. ಶ್ರಮವಾದರೂ ಉದ್ಯೋಗದಲ್ಲಿ ಮುನ್ನಡೆ. ಅಧ್ಯಯನದಲ್ಲಿ ಪ್ರಗತಿ. ಆರೋಗ್ಯದಲ್ಲಿ ಸುಧಾರಣೆ. ಶುಭ ದಿನ: 25; ಗಣಪತಿ, ಪಾರ್ವತಿ ಅಷ್ಟೋತ್ತರ ಪಠಿಸಿ